## 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ, ನ್ಯಾಯಾಲಯದಲ್ಲಿ

**ಸಿಸಿ ನಂ. 1744/2023**

| ಪಿರ್ಯಾದುದಾರರು | ವಿರುದ್ಧ | ಆರೋಪಿತರು: |
|---|---|---|
| ಸಂತೆಬೆನ್ನೂರು ಪೊಲೀಸ್ ಠಾಣೆ | | 6. ಈಶ<br>ಬಿನ್ ಕರಿಬಸಯ್ಯ,<br>ವಯಸ್ಸುಃ 28 ವರ್ಷ,<br>ವಾಸಃ ಚಿಕ್ಕಕುರುಬರಹಳ್ಳಿ ಗ್ರಾಮ,<br>ಚನ್ನಗಿರಿ ತಾಲ್ಲೂಕು. |

:: **ದೋಷಾರೋಪಣೆ** ::

ನಾನು ಶ್ರೀಮತಿ. ಮಹಾಲಕ್ಷ್ಮಿ ಜಿ. ಎಂ.ಎ., ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ, ಈ ಮೇಲ್ಕಂಡ ಆರೋಪಿತರಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗೆ ಗುರಿಪಡಿಸುತ್ತೇನೆ.

3 ನೇ ಆರೋಪಿಯಾದ ನೀವು ಇತರೆ ಆರೋಪಿತರೊಂದಿಗೆ ಸೇರಿಕೊಂಡು ದಿನಾಂಕ 14.08.2016 ರಂದು ಬೆಳಗಿನ ಜಾವ 1.30 ಗಂಟೆ ಸಮಯದಲ್ಲಿ ನಲ್ಲುದುರೆ ಗ್ರಾಮದ ಚಾಸಾ.1 ರವರ ಮನೆಯ ಬಾಗಿಲಿಗೆ ಹಾಕಿದ್ದ ಬೀಗವನ್ನು ಮುರಿದು ಮನೆಯ ಒಳಗಡೆ ಪ್ರವೇಶ ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.454 ರಂತೆ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಅಪಾದಿಸಲಾಗಿದೆ?

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 3 ನೇ ಆರೋಪಿಯಾದ ನೀವು ಇತರೆ ಆರೋಪಿತರೊಂದಿಗೆ ಸೇರಿಕೊಂಡು ಚಾಸಾ.1 ರವರ ಮನೆಯ ಬಾಗಿಲಿಗೆ ಹಾಕಿದ್ದ ಬೀಗವನ್ನು ಮುರಿದು ಮನೆಯ ಒಳಗಡೆ ಪ್ರವೇಶ ಮಾಡಿ ಮನೆಯ ಬೀರುವಿನಲ್ಲಿದ್ದ 3,00,000/- ರೂ. ನಗದು ಹಣ ಮತ್ತು 1,00,000/- ರೂ ಬೆಲೆ ಬಾಳುವ 35 ಗ್ರಾಂ ತೂಕದ ಬಂಗಾರದ ಕೊರಳ ಚೈನನ್ನು ಕಳ್ಳತನ ಮಾಡುವ ಮೂಲಕ ಭಾ.ದಂ.ಸಂ.ಕಲಂ 380 ರಂತೆ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಅಪಾದಿಸಲಾಗಿದೆ?

ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ.

**ದಿನಾಂಕಃ** ಸಹಿ/-

**ಸ್ಥಳಃ ಚನ್ನಗಿರಿ.** **ಸಿ/ಸಿ 2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**
**ಜೆಎಮ್‌ಎಫ್‌ಸಿ ನ್ಯಾಯಾಲಯ, ಚನ್ನಗಿರಿ.**